ಓ.ಎಸ್. ನಂ.3/2017
ಡಿಡಬ್ಲೂ 1

**(ಇಂದು ದಿಃ 06.03.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು)**

<u>ಮುಂದುವರೆದ ಮುಖ್ಯ ವಿಚಾರಣೆ ಃ- ಶ್ರೀಮತಿ ಯು.ಕೆ.ಐ. ವಕೀಲರಿಂದ ಪ್ರತಿವಾದಿ ಪರ ಃ-</u>

1. ನಾನು ಇಂದು ನ್ಯಾಯಾಲಯಕ್ಕೆ ಒಂದು ಮರಣ ಪ್ರಮಾಣ ಪತ್ರವನ್ನು ಹಾಜರು ಪಡಿಸಿದ್ದು ಅದನ್ನು ನಿಡಿ-4 ಎಂದು ಗುರುತಿಸಲಾಯಿತು.
2. ಎಂ.ಆರ್.ನಂ.ಟಿ-108/2016-17 ಹಾಜರು ಪಡಿಸಿದ್ದು ಅದನ್ನು ನಿಡಿ-5 ಎಂದು ಗುರುತಿಸಲಾಯಿತು.
3. 24 ಪಹಣಿಗಳನ್ನು ಹಾಜರು ಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಡಿ-6 ರಿಂದ ನಿಡಿ-29 ಎಂದು ಗುರುತಿಸಲಾಯಿತು.

ಆದ್ದರಿಂದ ದಾವೆಯನ್ನು ವಜಾ ಮಾಡಲು ವಿನಂತಿ.

<u>ಪಾಟೀ ಸವಾಲು ಃ- ಶ್ರೀ ಎ.ಡಬ್ಲ್ಯೂ .ಎ. ವಕೀಲರಿಂದ ವಾದಿಗಳ ಪರ ಃ-</u>

ನಿಡಿ-6 ರಿಂದ ನಿಡಿ-29ರಲ್ಲಿ ಯಾವ ಆಧಾರದ ಮೇಲೆ ನನ್ನ ಹೆಸರು ನಮೂದಾಗಿದೆ ಅದರಲ್ಲಿ ನಮೂದು ಇಲ್ಲ ಎಂದರೆ ಸಾಕ್ಷಿಯು ಮೌಖಿಕ ದಾನದ ಮೂಲಕ ನಮೂದಾಗಿದೆ ಎಂದು ನುಡಿಯುತ್ತಾರೆ. ನಿಡಿ-6 ರಿಂದ ನಿಡಿ-29ರಲ್ಲಿ ಮೌಖಿಕ ದಾನದಿಂದ ನನಗೆ ಬಂದಿದೆ ಎಂದು ನಮೂದು ಇಲ್ಲ ಎಂದರೆ ಸಾಕ್ಷಿಯು ಮೌಖಿಕ ದಾನ ನೀಡಲಾಗಿದೆ ಎಂದು ನುಡಿಯುತ್ತಾರೆ. ನನ್ನ ಮತ್ತು ನನ್ನ ಸಹೋದರನ ಹೆಸರಿಗೆ 1993-94ರಲ್ಲಿ ಖಾತೆಯಾಗಿರುತ್ತದೆ. ನಿಡಿ-6 ರಿಂದ ನಿಡಿ-29ರಲ್ಲಿ ನನ್ನ ಹೆಸರು ಮಾತ್ರ ನಮೂದು ಇದೆ ಆದರೆ ನನ್ನ ಸಹೋದರನ ಹೆಸರಿಗೆ ಬೇರೆ ಪಹಣಿ ಇರುತ್ತದೆ. ನನ್ನ ಸಹೋದರನ ಹೆಸರಿಗೆ ರಿಸ ನಂ.80 ಇರುತ್ತದೆ. ನನ್ನ ಹೆಸರಿಗೆ ಯಾವ ಜಮೀನಿನ ಖಾತೆ ಇದೆ ಎಂದರೆ ಸಾಕ್ಷಿಯು ರಿಸ ನಂ.80ರಲ್ಲಿ ನನ್ನ ಮತ್ತು ನನ್ನ ಸಹೋದರನ ಜಮೀನು ಇದೆ ಎಂದು ನುಡಿಯುತ್ತಾರೆ. ನನ್ನ ಮತ್ತು ನನ್ನ ಸಹೋದರನ ಬೇರೆ-ಬೇರೆ ಖಾತೆಗಳು ಇರುತ್ತವೆ. 2015ನೇ ಸಾಲಿನಲ್ಲಿ ನನ್ನ ಮತ್ತು ನನ್ನ ಸಹೋದರನ ಹೆಸರಿಗೆ ಬೇರೆ-ಬೇರೆ ಖಾತೆಗಳು ಆಗಿರುತ್ತವೆ. ನನ್ನ ಮತ್ತು ನನ್ನ ಸಹೋದರನ ಹೆಸರಿಗೆ ಇಭಾ ಆಧಾರದ ಮೇಲೆ ಖಾತೆಯಾಗಿರುತ್ತದೆ. ನಮ್ಮ ಪರವಾಗಿ ಇಭಾ ಆಗಿರುವುದಕ್ಕೆ ಮ್ಯೂಟೇಷನ್ ಇಲ್ಲ ಎಂದರೆ ಸರಿಯಲ್ಲ. ನಾನು ಮತ್ತು ನನ್ನ ಸಹೋದರ ಯಾವುದೇ ಆಧಾರ ವಿಲ್ಲದೇ ಕಂದಾಯ ಅಧಿಕಾರಿಗಳೊಂದಿಗೆ ಶಾಮಿಲ ಆಗಿ ಸೃಷ್ಟಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ. ನಮ್ಮ ಸಹೋದರಿಯರಿಗೆ ದಾವಾ ಸ್ವತ್ತಿನಲ್ಲಿ ಹಿಸ್ಸೆ ನೀಡಬಾರದು ಎಂಬ ಕಾರಣದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಮ್ಮ ಸಹೋದರಿಯರಿಗೆ

ತಲಾ ರೂ.50,000/- ಹಣವನ್ನು ನೀಡಿ ಅವರು ಸಮ್ಮತಿ ನೀಡಿದ ನಂತರ ಖಾತೆಯಾಗಿದೆ ಎಂದು ನುಡಿಯುತ್ತಾರೆ. ನಮ್ಮ ಸಹೋದರಿಯರಿಗೆ ತಲಾ ರೂ.50,000/- ನೀಡಿ ಸಮ್ಮತಿ ಪಡೆದ ಬಗ್ಗೆ ಪ್ರತಿವಾದ ಪತ್ರದಲ್ಲಾಗಲಿ ನನ್ನ ಸಾಕ್ಷ್ಯದ ಪ್ರಮಾಣ ಪತ್ರದಲ್ಲಿಆಗಲಿ ನಮೂದು ಮಾಡಿಲ್ಲ ಎಂದರೆ ಸಾಕ್ಷಿಯು ಮೌನ ವಹಿಸಿರುತ್ತಾರೆ. ನಮ್ಮ ಸಹೋದರಿಯರಿಗೆ ಹಣ ನೀಡಿದ ಬಗ್ಗೆ ರಶೀದಿ ಇದೆಯೇ ಎಂಬ ಪ್ರಶ್ನೆಗೆ ಸಾಕ್ಷಿಯು ವಿಶ್ವಾಸದಿಂದ ನೀಡಿದ್ದೇವೆ ಎಂದು ನುಡಿಯುತ್ತಾರೆ. ನಮ್ಮ ಸಹೋದರಿಯರಿಗೆ ತಲಾ ರೂ.50,000/- ನೀಡಿದ್ದೆವೇ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೆ್ನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ವಾದಿಯರ ಹಿಸ್ಸೆಯನ್ನು ಲಪಾಟಿಯಿಸುವ ಉದ್ದೇಶದಿಂದ ತಲಾ ರೂ. 50,000/- ನೀಡಿದ್ದೇವೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ. ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ. ಇದೆ.

ಪ್ರಭಾರಿ ಹಿರಿಯ ಸಿವಿಲ್ ನ್ಯಾಯಾಧೀಶರು,
ಆಳಂದ.